ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸ.ನಂ.88ರ ಜಮೀನನ್ನು ಸರ್ಕಾರದಿಂದ ಕಾರಿಡಾರ್ ಯೋಜನೆಗಾಗಿ ವಶಪಡಿಸಿಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

690(164) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಉತ್ತರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂತಹ ಆಶ್ರಯ, ಆರಾಧನಾ ಮತ್ತು ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿ ರಚಿಸದೇ ಇರಲು ಕಾರಣವೇನು?

ಆ) ಈ ಸಮಸ್ಯೆಯಿಂದ ನೂರಾರು ಬಡ ಕುಟುಂಬಗಳಿಗೆ ಕಳೆದ 6 ತಿಂಗಳಿಂದ ಅನ್ಯಾಯ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಸಮಿತಿಗಳನ್ನು ರಚನೆ ಮಾಡಲು ಸರ್ಕಾರಕ್ಕೆ ಅಡಚಣೆಗಳೇನಾದರೂ ಇವೆಯೇ:

ಈ) ಇಲ್ಲವಾದಲ್ಲಿ ಯಾವಾಗ ಸಮಿತಿಗಳನ್ನು ರಚನೆ ಮಾಡಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

ಅ) 1. ವಸತಿ ಇಲಾಖೆಯ ಸುತ್ತೋಲೆ ಸಂಖ್ಯೆ:ಏ:74:ಹೆಚ್.ಎ.ವೈ 04 ದಿ:20.11.04ರಂತೆ ವಸತಿ ಇಲಾಖೆಯು ಪಂಚಯತ್ ರಾಜ್ಯ ಸಂಸ್ಥೆಗಳ ಮೂಲಕ ವಸತಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಇದರನ್ವಯ ಆಶ್ರಯ ಯೋಜನೆ ಹಾಗೂ ಇತರ ಫಲಾನುಭವಿಗಳ ಆಧಾರಿತ ಯೋಜನೆಯ ಆಯ್ಕೆಯನ್ನು ಗ್ರಾಮ ಪಂಚಾಯ್ತಿಗಳು ಗ್ರಾಮ ಸಭೆಗಳ ಮೂಲಕ ಮಾಡಬೇಕಾಗುತ್ತದೆ. ಆದಕಾರಣ ಕಾನೂನು ಬದ್ಧವಾಗಿ ಆಶ್ರಯ ಸಮಿತಿಗಳನ್ನು ಪುನರ್ ರಚಿಸುವ ಅಗತ್ಯವಿರುವುದಿಲ್ಲ. ಆರಾಧನಾ ಹಾಗೂ ಅಕ್ರಮ–ಸಕ್ರಮ ಸಮಿತಿಗಳನ್ನು ಈವರೆಗೆ ರಚಿಸಿಲ್ಲ.

2. ಚುನಾವಣೆಗಳನ್ನು ಘೋಷಿಸಿದ್ದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಹಿಂದೆ ರಚಿಸಲಾಗಿದ್ದ ಅಕ್ರಮ–ಸಕ್ರಮ ಮತ್ತು ಆರಾಧನಾ ಸಮಿತಿಗಳನ್ನು ಸ್ಥಗಿತಗೊಳಿಸಲಗಿತ್ತು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಕ್ರಮ–ಸಕ್ರಮ ಮತ್ತು ಆರಾಧನಾ ಸಮಿತಿಗಳನ್ನು ರಚಿಸಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯಲಾಗುತ್ತಿದ್ದು ಸಮಿತಿಗಳನ್ನು ರಚಿಸಲು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಸಮಿತಿಗಳನ್ನು ರಚಿಸಲು ಕ್ರಮ ಜರುಗಿಸಲಾಗುತ್ತಿದೆ.

ಇ) ಇಲ್ಲ.

ಈ) ಶೀಘ್ರದಲ್ಲಿಯೇ ಸಮಿತಿಗಳನ್ನು ರಚಿಸಲಾಗುವುದು.